



ಎಂ.ಎ. ಕುಮಾರ್, ಬೆಂಗಳೂರು
ದೇವರಲ್ಲಿ ಬೇಡುವಾಗ ಕಣ್ಣು ಮುಚ್ಚಿಕೊಳ್ಳುವುದೇಕೆ?



'ಕಣ್ಣು ಮುಚ್ಚಿಕೊಳ್ಳುವುದಕ್ಕೆ ಮುಂಚೆ ಕರುಣಿಸು' ಎಂದು ಬೇಡಿಕೊಳ್ಳಲು.

ದವಡಿ ಈರಣ್ಣ, ಲಕ್ಷ್ಮೇಶ್ವರ
ಅಡುಗೆ ಮಾಡಿದವಳು ಹೆಚ್ಚೋ, ಅಡುಗೆ ಬಡಿಸಿದವಳು ಹೆಚ್ಚೋ?
ತಿನ್ನುವವರು ಗಿರಾಕಿಯೇ ಇಲ್ಲದಿದ್ದರೆ ಸರಕು, ಸೇವೆ ಎರಡೂ ವ್ಯರ್ಥ.

ಮುರಲೀಧರ ಕುಲಕರ್ಣಿ, ಬೀದರ
ಕೊರೊನಾ ಕಾಲದಲ್ಲಿ 60 ಮೀರಿದವರು ಬ್ಯಾಂಕಿಗೆ, ಮದುವೆಗೆ ಹೋಗುವಂತಿಲ್ಲ. 89ರವರು ರಾಜ್ಯಸಭೆಗೆ ಹೋಗಬಹುದೆ?
ಖಂಡಿತ. ನಿದ್ರಿಸಲು ಹೋಗುವುದಕ್ಕೆ ಆ ಕಾನೂನು ಅಡ್ಡಿಪಡಿಸುವುದಿಲ್ಲ.

ವಿ. ಹೇಮಂತಕುಮಾರ್, ಬೆಂಗಳೂರು
ಚೀನಾದ ಡ್ರಾಗನ್ನನ್ನು ನಾಶಪಡಿಸಲು ಭಾರತದ ಹನುಮಾನ್ ಸಾಕಲ್ಲವೇ ರಾಮ್‌ಜೀ?



ನಿಜ. ಆದರೆ ಮೊದಲಿಗೆ ಸ್ವಸಾಮರ್ಥ್ಯದ ಬಗ್ಗೆ ಇರುವ ಅನುಮಾನ್ ಬಗೆಹರಿಯಬೇಕು.

ಎಚ್.ಕೆ. ವಿಜಯಕುಮಾರ್, ಶಕ್ತಿನಗರ
ಕೆಲವು ಬಾಬಾಗಳು ಸ್ತ್ರೀವಶೀಕರಣ, ಸಾಲ ನಿವಾರಣೆ, ಉದ್ಯೋಗಯಶಕ್ಕೆ ಯಂತ್ರ ಕೊಡುವೆನೆನ್ನುವರಲ್ಲಾ, ನಂಬಬಹುದೆ?
ನಂಬಿ. ಇಲ್ಲದಿದ್ದರೆ ಕ್ರುದ್ಧ ಹೆಂಡತಿ, ಸಾಲಗಾರರ ಮಧ್ಯೆ ಇರುವ ಆ ನಿರುದ್ಯೋಗಿಯ ಜೀವನ ಕಷ್ಟವಾಗುತ್ತದೆ.

ಬಿ.ಆರ್. ಉಷಾ, ಶ್ರೀವಿದ್ಯಾನಗರ
ಮಾವು ಸಿಹಿ, ಬೇವು ಕಹಿ. ನೀವು?
ಮಾವನಿಗೆ ಕಹಿ, ಭಾಮಿನಿಗೆ ಸಿಹಿ.

ಎಂ.ಎ. ಕುಮಾರ್, ಬೆಂಗಳೂರು
ಆಸ್ಪತ್ರೆ, ಸ್ಮಶಾನಗಳಿಗೆ ಸಂಬಂಧವಿದ್ದರೂ ಆಸ್ಪತ್ರೆಗಿರುವಷ್ಟು ಭದ್ರತೆ ಸ್ಮಶಾನಗಳಿಗೇಕಿಲ್ಲ?
ಸ್ಮಶಾನದಲ್ಲಿ ಒಳಸೇರಿದವರು ಬಿಲ್ ಕೊಡದೆ ಓಡಲು ಯತ್ನಿಸುವುದಿಲ್ಲವಲ್ಲ.

ಅನಸೂಯ ಟಿ. ಕೇದಿಗೆಮನೆ
ಭಗವಂತ ಎರಡು ಕೈಗಳ ಬದಲು ನಾಲ್ಕು ಕೈಗಳನ್ನು ಕೊಟ್ಟಿದ್ದರೆ?
ಷರ್ಟು, ಬನಿಯನ್, ಟಾಪ್‌ಗಳಿಗೆ ಹೆಚ್ಚು ಬಟ್ಟೆ ಬೇಕಾಗುತ್ತಿತ್ತು.

ಚಿದಾನಂದ, ಜವನಗೊಂಡನಹಳ್ಳಿ
ಸುದ್ದಿವಾಹಿನಿಗಳು ಒಂದೇ ವಾಕ್ಯದ ಸುದ್ದಿಯನ್ನು 10 ಬಾರಿ ಸ್ಕ್ರೀನ್ ಮೇಲೆ ತೋರಿಸಿ 10 ಬಾರಿ ಓದುವರಲ್ಲಾ?
ಉರು ಹೊಡೆದರೂ ಪಾಸಾಗದ ಮೊದ್ದುಗಳಿರಬೇಕು; ತನ್ನಂತೆ ಪರರ ಬಗೆಯುತ್ತಾರೆ.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
ಕುತಂತ್ರ; ಇದು ಪುಲ್ಲಿಂಗವೋ ಅಥವಾ ಸ್ತ್ರೀಲಿಂಗವೋ ರಾಮ್‌ಜಿ?
ಅವರಿವರ ಸ್ವತ್ತನ್ನೋ, ಹಿತವನ್ನೋ pull ಮಾಡುವುದರಿಂದ ಪುಲ್ಲಿಂಗವೇ.

ಅಶೋಕ ಹಾಲಣ್ಣವರ್, ಗದಗ
ಕೊರೊನಾ ವೈರಸ್ ಸೊಳ್ಳೆಯಂತೆ ಕಣ್ಣಿಗೆ ಕಾಣುವಂತಿದ್ದರೆ ಮನುಜ ಏನು ಮಾಡುತ್ತಿದ್ದ?
ಸೊಳ್ಳೆಪರದೆ ಡ್ರೆಸ್, ಸೊಳ್ಳೆಪರದೆ ಮಾಸ್, ಸೊಳ್ಳೆಪರದೆ ಹೆಲ್ಮೆಟ್ ಧರಿಸುತ್ತಿದ್ದ.

ನರಸಿಂಹಾರೆಡ್ಡಿ ಯಂಕಮೊಳ, ಸೇಡಂ
ಮಾತು ಆಡಿದರೆ ಹೋಯ್ತು; ಮುತ್ತು ಒಡೆದರೆ ಹೋಯ್ತು. ಮೊಬೈಲ್ ಒಡೆದರೆ?
ಹೋದೆಯಾ ಸ್ಯಾಮ್ಸಂಗ್ನಲ್ಲಿ ಅಂದ್ರೆ ಬಂದೆ ಆ್ಯಪಲ್‌ನಲ್ಲಿ ಅಂತ ವಕ್ರಿಸತ್ತೆ.

ವಿ. ಹಮೀದ್, ವಿಟ್ಲ
ಕಲ್ಲೇಟಿಗಿಂತ ಕಣ್ಣೇಟು ಜೋರಾಗಲು ಕಾರಣವೇನು?
**Bandage**ಗಿಂತ **Bondage** ಗಟ್ಟಿಯಾದುದರಿಂದ.

## ಬಹುಮಾನಿತ ಪ್ರಶ್ನೆ

ನಾಜ್ಯೋತಿ, ಹೂವಿನಹಡಗಲಿ
ಪ್ರತಿ ವರ್ಷವೂ ದಿವಂಗತರ 'ಪುಣ್ಯತಿಥಿ' ನಡೆಯುತ್ತದೆ. ಪುಣ್ಯ ಯಾರಿಗೆ ರಾಮ್‌ಜಿ?
ನಿಜವಾದ ತಿಥಿ ಆಗುವುದು ಕರ್ತೃವಿಗೆ; ಪುಣ್ಯ ಚೆನ್ನಾಗಿ ಭುಜಿಸುವ ತಾಕತ್ತಿರುವವರಿಗೆ.

ಬಿ. ಚಂದ್ರೇಗೌಡ, ಬೆಂಗಳೂರು
ಮದುವೆಯಾಗಬೇಕೆನ್ನುವ ಹುಡುಗರಿಗೆ ಹುಡುಗಿಯರು ಸಿಗುವುದು ತುಂಬಾ ದುಸ್ತರವಾಗಿದೆಯಲ್ಲಾ?
'ಸೇವಾಮನೋಭಾವದ ಗಂಡುಗಳು ವಿರಳವಾಗಿರುವುದೇ ಕಾರಣ' ಎಂದಳಾ ಬೆಡಗಿ.

ಪಿ.ಜೆ. ರಾಘವೇಂದ್ರ, ಮೈಸೂರು
ಕೊರೊನಾ ಮಾರಿಗಿಂತ ಕೂಗುಮಾರಿಗಳೇ ಹೆಚ್ಚು ಭಯ ಹುಟ್ಟಿಸುತ್ತವಲ್ಲಾ ರಾಮ್?
'ಗ್ಲೋಬಲ್ ಡಾಂಕಿ ಅವಾರ್ಡ್'ಗೆ ಸ್ಪರ್ಧಿಸುತ್ತಿದ್ದಾರಂತೆ. ಬನಿ ಇಲ್ಲದವರಿಗೆ ಧ್ವನಿಯೇ ಅಸ್ತ್ರ.

ಜೆ.ಆರ್. ಆದಿನಾರಾಯಣಮುನಿ ಬೆಂಗ್ಳೂರ್
ಹೃದಯದಲ್ಲಿ ಸಿಂಹಾಸನ ಎಲ್ಲಿರುತ್ತದೆ?



ಇರುವುದಿಲ್ಲ; 'ಲವ್ ವೈರಸ್' ತಾನೇ ತಂದು ಹಾಕಿಕೊಳ್ಳುತ್ತದೆ.

ಸ್ವಾತಿ ಎಂ.ಎಸ್., ಗೌರಿಬಿದನೂರು
ಕೊರೊನದಿಂದ ನೀವು ಕಲಿತ ಪಾಠ ಏನು?
ನ್ಯೂಸ್ ಚಾನಲ್ ವೀಕ್ಷಣೆ ಆರೋಗ್ಯಕ್ಕೆ ಹಾನಿಕರ ಎಂದು.

ಅಂಚೆ ಸುಬ್ರಹ್ಮಣ್ಯ, ಕೊಪ್ಪ
ತಲೆಯಲ್ಲಿ ಕೂದಲು ಇಲ್ಲದವರು ಅತಿ ಬುದ್ಧಿವಂತರಂತೆ. ಹೌದಾ?
ಚೆನ್ನಾಗಿ ತಲೆ ಬೋಳಿಸಿಕೊಂಡ ಮೇಲೆ ಕೆಲವರು ಬುದ್ಧಿ ಕಲಿತಿರುವುದಂತೂ ದಿಟ.

ಸುನಿತಾ ಬಾಣಿ, ಬೆಂಗಳೂರು
ಜೀವನಕ್ಕೆ ಮದುವೆ ಅನಿವಾರ್ಯವಾಗಿದೆಯೆ?
'ಇಲ್ಲ' ಎಂದಿತು ಇಡೀ ಪ್ರಾಣಿವರ್ಗ.

ಪ್ರಶ್ನೆಗಳನ್ನು ಕಳುಹಿಸಿ
editorsu@sudha.co.in

■ ರಾಮ್